ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 24 ನೇ ಮಾರ್ಚ್, 2020

ನಂಜನಗೂಡು ಪಟ್ಟಣದಲ್ಲಿ ಸಸ್ಯಕಾಶಿಯನ್ನು ನಿರ್ಮಿಸುವ ಬಗ್ಗೆ

ಶ್ರೀ ಎಸ್ ನಾಗರಾಜ್ (ಸಂದೇಶ್ ನಾಗರಾಜ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

1578 (1832) ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ನಂಜನಗೂಡು ನಗರದಲ್ಲಿ ಸಸ್ಯಕಾಶಿ ನಿರ್ಮಾಣಕ್ಕಾಗಿ ಗುರುತಿಸಿರುವ ಜಾಗದ ವಿಸ್ತೀರ್ಣ ಎಷ್ಟು ; ಈ ಜಾಗವನ್ನು ತೋಟಗಾರಿಕೆ ಇಲಾಖೆ ವಶÀಕ್ಕೆ ಪಡೆದು ಸಸ್ಯಕಾಶಿಗೆ ನೀಲನಕ್ಷೆಯನ್ನು ಸಿದ್ಧಪಡಿಸಲಾಗಿದೆಯೇ ; (ವಿವರಗಳನ್ನು ಒದಗಿಸುವುದು)

(ಆ) ಈ ಸಸ್ಯಕಾಶಿ ನಿರ್ಮಾಣದ ಅಂದಾಜು ವೆಚ್ಚ ಎಷ್ಟು ; ಪ್ರಸ್ತುತ ಬಿಡುಗಡೆಯಾಗಿರುವ ಅನುದಾನ ಎಷ್ಟು ; ಯಾವ ಯಾವ ಮೂಲದಿಂದ ಅನುದಾನಗಳು ಬಂದಿವೆ ; ಯಾವ ಯಾವ ಕಾಮಗಾರಿಗಳನ್ನು ಆರಂಭಿಸಲಾಗಿದೆ ; ಕೂಡಲೇ ನೀಲನಕ್ಷೆಗೆ ಅನುಗುಣವಾಗಿ ಸಸ್ಯಕಾಶಿಯನ್ನು ನಿರ್ಮಿಸಿ ನಿರ್ಮಲ ಸ್ವಚ್ಛ ಪರಿಸರವನ್ನು ಕಲ್ಪಿಸಲು ಸರ್ಕಾರವು ಕೂಡಲೇ ಜರುಗಿಸುವುದೇ?